# ಕರ್ನಾಟಕ ವಿಧಾನ ಪರಿಷತ್ತು
## ನೂರ ಇಪ್ಪತ್ತಾರನೆಯ ಅಧಿವೇಶನ
## ಕಾರ್ಯಕಲಾಪಗಳ ಪಟ್ಟಿ
**ಶನಿವಾರ, ದಿನಾಂಕ: 20ನೇ ಡಿಸೆಂಬರ್, 2014**
**(ಸಮಯ: ಬೆಳಗ್ಗೆ 11.00 ಗಂಟೆಗೆ)**

******

### 01. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು:-

01) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2014

02) ಕರ್ನಾಟಕ ಮರಗಳ ಸಂರಕ್ಷಣಾ (ತಿದ್ದುಪಡಿ) ವಿಧೇಯಕ, 2014

### 02. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

**I. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2014**

**ಶ್ರೀ ಟಿ.ಬಿ. ಜಯಚಂದ್ರ** (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) ಅವರು:-

01. ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2014ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

02. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**II. ಕರ್ನಾಟಕ ಮರಗಳ ಸಂರಕ್ಷಣಾ (ತಿದ್ದುಪಡಿ) ವಿಧೇಯಕ, 2014**

**ಶ್ರೀ ಬಿ. ರಮಾನಾಥ ರೈ** (ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) ಅವರು:-

01. ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2014ನೇ ಸಾಲಿನ ಕರ್ನಾಟಕ ಮರಗಳ ಸಂರಕ್ಷಣಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

02. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

..2

## ೦3. ಉತ್ತರ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಂದುವರೆದ ವಿಶೇಷ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

## ೦4. ಗಮನ ಸೆಳೆಯುವ ಸೂಚನೆಗಳು

**ಅ) ಶ್ರೀಯುತರುಗಳಾದ: ವೈ.ಎ. ನಾರಾಯಣಸ್ವಾಮಿ, ಗೋ. ಮಧುಸೂದನ್ ಹಾಗೂ ಅಶ್ವಥನಾರಾಯಣ** ಅವರುಗಳು ರಾಜ್ಯದಲ್ಲಿ ಯೂರಿಯಾ, ಮರಗೆಣಸಿನಪುಡಿ ಹಾಗೂ ಮತ್ತಿತರ ರಾಸಾಯನಿಕಗಳನ್ನೊಳಗೊಂಡ ಕಲಬೆರಕೆ ಹಾಲು ಮಾರಾಟವಾಗುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಇಂತಹ ಅಪರಾಧಗಳನ್ನು ಎಸಗುತ್ತಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ **ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ** ಗಮನ ಸೆಳೆಯುವುದು.

**ಆ) ಶ್ರೀಮತಿ ವಿಮಲಾಗೌಡ** ಅವರು ಬೆಂಗಳೂರಿನ ಏಳು ನಗರ ಸಭೆ ಹಾಗೂ ಒಂದು ಪುರಸಭೆ ವ್ಯಾಪ್ತಿಯಲ್ಲಿ ನೀರಿನ ಸಂಪರ್ಕವನ್ನು ಕಲ್ಪಿಸುವ ಹೆಸರಿನಲ್ಲಿ ನಕಲಿ ಬಿಲ್ಲುಗಳನ್ನು ಸೃಷ್ಟಿಸಿ ಜಲಮಂಡಳಿ ಅಧಿಕಾರಿಗಳು ಕೋಟ್ಯಾಂತರ ರೂಪಾಯಿಗಳನ್ನು ವಂಚಿಸಿರುವ ಬಗ್ಗೆ **ಮಾನ್ಯ ಮುಖ್ಯಮಂತ್ರಿಯವರ** ಗಮನ ಸೆಳೆಯುವುದು.

**ಇ) ಶ್ರೀ ಬಿ. ರಾಮಕೃಷ್ಣ** ಅವರು ಮಂಡ್ಯ ನಗರದ ಶ್ರೀ ಲಕ್ಷ್ಮೀ ಜನಾರ್ಧನಸ್ವಾಮಿ ದೇವಸ್ಥಾನಕ್ಕೆ ಸೇರಿದ ಸರ್ವೆ ನಂ: 184ರಲ್ಲಿನ ಸುಮಾರು 3.34 ಎಕರೆ ಪ್ರದೇಶವನ್ನು ಅತಿಕ್ರಮಿಸಿಕೊಂಡಿದ್ದ ಸಾರ್ವಜನಿಕರಿಂದ ರಾಜ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಸರ್ಕಾರದ ವಶಕ್ಕೆ ಪಡೆದುಕೊಂಡಿರುವ ಜಾಗದಲ್ಲಿರುವ ಹಳೆಯ ಕಟ್ಟಡಗಳನ್ನು ನೆಲಸಮಗೊಳಿಸಿ ಆ ಸ್ಥಳದಲ್ಲಿ ಮುಜರಾಯಿ ಇಲಾಖೆಯಿಂದ ಸಾರ್ವಜನಿಕ ಸರ್ಕಾರಿ ಕಛೇರಿ ಕಟ್ಟಡಗಳನ್ನು ಮತ್ತು ವಾಣಿಜ್ಯ ವ್ಯಾಪಾರ ಕಟ್ಟಡಗಳನ್ನು ನಿರ್ಮಿಸುವ ಬಗ್ಗೆ **ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರ** ಗಮನ ಸೆಳೆಯುವುದು.

**ಈ) ಶ್ರೀ ಐವನ್ ಡಿ'ಸೋಜಾ** ಅವರು ಸರ್ಕಾರವು ಕಂದಾಯ ಇಲಾಖೆಗೆ ಸುತ್ತೋಲೆಯನ್ನು ಹೊರಡಿಸಿ ಅಟಲ್‌ಜಿ ಜನಸ್ನೇಹಿ ಕೇಂದ್ರಗಳಲ್ಲಿ ಸಲ್ಲಿಸುವ ದಾಖಲೆಗಳನ್ನು ನೋಟರಿ ದೃಢೀಕರಿಸುವ ಬದಲು ಸ್ವಯಂ ದೃಢೀಕರಣಗಳನ್ನು ಪಡೆದು ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ, ಸೇವೆಯನ್ನು ಒದಗಿಸುವ ದಿಸೆಯಲ್ಲಿ ಕಾರ್ಯ ಪ್ರವೃತ್ತರಾಗಬೇಕೆಂದು ಸೂಚಿಸಿದ್ದು, ಅದರಂತೆ, ಸ್ವಯಂ ದೃಢೀಕರಣ ಕ್ರಮವನ್ನು ಎಲ್ಲಾ ಇಲಾಖೆಗಳಿಗೂ ಅನ್ವಯವಾಗುವಂತೆ ಆದೇಶವನ್ನು ಹೊರಡಿಸುವ ಬಗ್ಗೆ **ಮಾನ್ಯ ಮುಖ್ಯಮಂತ್ರಿಯವರ** ಗಮನ ಸೆಳೆಯುವುದು.

**ಉ) ಡಾ: ಜಯಮಾಲ ರಾಮಚಂದ್ರ** ಅವರು ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಗುಂಡ್ರೆವುಲು ಬಳಿ ತುಂಗಭದ್ರ ನದಿಗೆ ಬೃಹತ್ ಅಣೆಕಟ್ಟು ನಿರ್ಮಿಸಲು ಆಂಧ್ರ ಸರ್ಕಾರವು ನಿರ್ಧರಿಸಿರುವುದರಿಂದ ಆ ಭಾಗದ ಸಾವಿರಾರು ಎಕರೆ ಫಲವತ್ತಾದ ನೀರಾವರಿ ಕೃಷಿ ಭೂಮಿ ಮುಳುಗಡೆಯಾಗಲಿದ್ದು ಈ ಗಡಿ ಭಾಗದ ರೈತರ ಹಿತರಕ್ಷಣೆ ಕಾಪಾಡುವ ಬಗ್ಗೆ **ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ** ಗಮನ ಸೆಳೆಯುವುದು.

**ಊ) ಶ್ರೀಮತಿ ಮೋಟಮ್ಮ** ಅವರು ಬೆಂಗಳೂರಿನ ಭೂಪಸಂದ್ರದಲ್ಲಿರುವ ಆಲ್‌ಬರೇಕ್ ಪಾಲಿಟೆಕ್ನಿಕ್‌ನಲ್ಲಿ ಗುರುತಿಸಲಾಗಿದ್ದ ಬೋಧಕ ಮತ್ತು ಬೋಧಕೇತರ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇಮಕಾತಿ ಮಾಡುವಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ **ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ** ಗಮನ ಸೆಳೆಯುವುದು.

**ಋ) ಶ್ರೀಯುತರುಗಳಾದ: ಕೆ.ಬಿ. ಶಾಣಪ್ಪ ಹಾಗೂ ಕ್ಯಾಪ್ಟನ್ ಗಣೇಶ್ ಕಾರ್ಣಿಕ್** ಅವರುಗಳು ಭೀಮಾ ನದಿಯ ನೀರನ್ನು ಬಳಸಿಕೊಂಡು 1320 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲು ವಿದ್ಯುತ್ ಸ್ಥಾವರವನ್ನು ಸ್ಥಾಪಿಸುವ ಸಲುವಾಗಿ ಗುಲಬರ್ಗಾ ಜಿಲ್ಲೆಯ ಹೊನ್ನಕಿರಣಗಿ, ಫಿರೋಜಾಬಾದ ಮತ್ತು ನದಿಸಿನ್ನೂರ ಗ್ರಾಮಗಳ ಒಟ್ಟು 1601 ಎಕರೆ ಫಲವತ್ತಾದ ರೈತರ ಜಮೀನನ್ನು ಸ್ವಾಧೀನಪಡಿಸಿಕೊಂಡು ನಾಲ್ಕೈದು ವರ್ಷಗಳು ಕಳೆದರೂ ಸಹ ವಿದ್ಯುತ್ ಸ್ಥಾವರವನ್ನು ಪ್ರಾರಂಭ ಮಾಡದಿರುವ ಬಗ್ಗೆ **ಮಾನ್ಯ ಇಂಧನ ಸಚಿವರ** ಗಮನ ಸೆಳೆಯುವುದು.

**ಋ) ಶ್ರೀಮತಿ ತಾರಾಅನೂರಾಧ** ಅವರು ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಸ್ಥಿತಿಗತಿ ಮತ್ತು ವಿದ್ಯಾರ್ಥಿಗಳ ಪೋಷಣೆ ಸುಧಾರಿಸುವ ಬಗ್ಗೆ **ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ** ಗಮನ ಸೆಳೆಯುವುದು.

**ಎ) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)** ಅವರು ಮಂಡ್ಯ ಜಿಲ್ಲೆ ಕಸಬಾ ಹೋಬಳಿಯ ಶ್ರೀರಂಗಪಟ್ಟಣ ಗ್ರಾಮದ ಸರ್ವೇ ನಂ: 351, 352, 353/1 ಹಾಗೂ 353/2 ಗಳಲ್ಲಿನ ಒಟ್ಟು 19 ಎಕರೆ 6 ಗುಂಟೆ ಜಮೀನನ್ನು ಕರ್ನಾಟಕ ಗೃಹ ಮಂಡಳಿ ಸ್ವಾಧೀನ ಪಡಿಸಿಕೊಳ್ಳಲು ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದು, ಸದರಿ ಆದೇಶವನ್ನು ಹಿಂಪಡೆಯುವ ಬಗ್ಗೆ **ಮಾನ್ಯ ವಸತಿ ಸಚಿವರ** ಗಮನ ಸೆಳೆಯುವುದು.

**ಏ) ಶ್ರೀ ಕೆ.ಗೋವಿಂದರಾಜ್** ಅವರು ಕೇಂದ್ರ ಸರ್ಕಾರದ ತೋಟಗಾರಿಕೆ ಇಲಾಖೆಯ ಸಂಶೋಧನೆಗೆ ಇರುವ ಪ್ಲಾಂಟೇಶನ್‌ಗಳಲ್ಲಿ ಹಾಗೂ ರಾಜ್ಯದ ಹಲವು ತೋಟಗಳಲ್ಲಿ ಬೆಳೆಯ ರಕ್ಷಣೆಗಾಗಿ ಬಲೆಗಳನ್ನು ಉಪಯೋಗಿಸುವುದರಿಂದ, ವಲಸೆ ಹಕ್ಕಿ ಪಕ್ಷಿಗಳು ಬಲೆಗೆ ಸಿಕ್ಕಿ ಸಾವನ್ನಪ್ಪಿರುವುದರಿಂದ ಈ ಬಗ್ಗೆ ಸರ್ಕಾರ ಪರ್ಯಾಯ ಮಾರ್ಗೋಪಾಯವನ್ನು ಸೂಚಿಸುವ ಬಗ್ಗೆ **ಮಾನ್ಯ ತೋಟಗಾರಿಕೆ ಸಚಿವರ** ಗಮನ ಸೆಳೆಯುವುದು.

## ೦5. ನಿಯಮ 330ರ ಮೇರೆಗೆ

**ಅ) ಶ್ರೀ ಪಟೇಲ್ ಶಿವರಾಂ** ಅವರು ರಾಜ್ಯದಲ್ಲಿ ಹುಚ್ಚು ನಾಯಿ ಕಡಿತ ಹಾಗೂ ಹಾವು ಕಡಿತಕ್ಕೆ ಒಳಗಾಗಿರುವ ರೋಗಿಗಳಿಗೆ ಸರ್ಕಾರಿ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಜೀವನಿರೋಧಕ ಔಷಧಿ ಹಾಗೂ ಲಸಿಕೆಗಳು ಲಭ್ಯವಿಲ್ಲದಿರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

**ಆ) ಶ್ರೀ ಮರಿತಿಬ್ಬೇಗೌಡ** ಅವರು ರಾಜ್ಯದಲ್ಲಿ ಪ್ರಸಕ್ತ ರೈತರು ರಾಸಾಯನಿಕ ಮತ್ತು ಸಾವಯವ ಕೃಷಿ ಪದ್ಧತಿ ಬಳಕೆ ಮಾಡಿ ಬೆಳೆಗಳನ್ನು ಬೆಳೆಯುತ್ತಿದ್ದು, ಇದರಿಂದಾಗಿ ಕೃಷಿ ಉತ್ಪಾದನೆ, ಸಾರ್ವಜನಿಕರಲ್ಲಿ ಆರೋಗ್ಯ ಹಾಗೂ ಭೂಮಿಯ ಫಲವತ್ತತೆ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತಿರುವುದರಿಂದ, ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಕೃಷಿ ರಾಜ್ಯ ಸಚಿವರು)**

**ಇ) ಶ್ರೀಯುತರುಗಳಾದ: ಕೋಟ ಶ್ರೀನಿವಾಸ ಪೂಜಾರಿ ಹಾಗೂ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ** ಅವರುಗಳು ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ತಿದ್ದುಪಡಿ ವರದಿಯ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಈ) ಶ್ರೀಯುತರುಗಳಾದ: ಬಿ.ಜೆ.ಪುಟ್ಟಸ್ವಾಮಿ, ಡಿ.ಎಸ್.ವೀರಯ್ಯ, ಸಿ.ಹೆಚ್. ವಿಜಯಶಂಕರ ಹಾಗೂ ವೈ.ಎ. ನಾರಾಯಣ ಸ್ವಾಮಿ** ಅವರುಗಳು ಹಳೇ ಮೈಸೂರು ಭಾಗದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಅಂತರ್ಜಲ ಕುಸಿದಿರುವುದರಿಂದ, ಆ ಭಾಗದ ಜನ ಹಾಗೂ ಜಾನುವಾರುಗಳಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಉ) ಶ್ರೀ ಸೋಮಣ್ಣ ಮ. ಬೇವಿನಮರದ** ಅವರು ಹಾವೇರಿ ಜಿಲ್ಲೆ ಹಾಗೂ ರಾಜ್ಯಾದ್ಯಂತ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಅಧಿಕಾರಿಗಳು ಕಳೆದ ಸಾಲಿನಲ್ಲಿ ಸರ್ಕಾರದ ಬೆಂಬಲ ಬೆಲೆಯಲ್ಲಿ ವ್ಯಾಪಾರಸ್ಥರಿಂದ ಕಳಪೆ ಮಟ್ಟದ ಮೆಕ್ಕೆ ಜೋಳವನ್ನು ಖರೀದಿಸಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನುಂಟು ಮಾಡಿರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)**

..4

**ಊ) ಶ್ರೀ ಇ. ಕೃಷ್ಣಪ್ಪ** ಅವರು ಬೆಂಗಳೂರು ನಗರ ಜಿಲ್ಲೆಯಲ್ಲಿ ಭೂ ಮಂಜೂರು ಪ್ರಕರಣಗಳಿಗೆ ಸಂಬಂಧಿಸಿದ ಕಾಣೆಯಾಗಿರುವ ಕಡತಗಳನ್ನು ಪುನರ್ ರಚನೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಕಂದಾಯ ಸಚಿವರು)**

**ಋ) ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ** ಅವರು ಬೆಳಗಾವಿ ಜಿಲ್ಲೆ ಸವದತ್ತಿಯಿಂದ ಸವದತ್ತಿ ಮಾಮಿನಿ ಕೆರೆಯ 3ನೇ ಬ್ಲಾಕ್ ಕೆನಾಲ್‌ನ್ನು ದುರಸ್ಥಿಗೊಳಿಸುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಭಾರಿ ಮತ್ತು ಮಾಧ್ಯಮ ನೀರಾವರಿ ಸಚಿವರು)**

**ೠ) ಶ್ರೀ ವಿ.ಎಸ್. ಉಗ್ರಪ್ಪ ಹಾಗೂ ಶ್ರೀ ಹೆಚ್.ಎಂ. ರೇವಣ್ಣ** ಅವರು ಕರ್ನಾಟಕ ಕೈಗಾರಿಕಾ ಪ್ರದೇಶ ಮಂಡಳಿ ಕೇಂದ್ರ ಕಛೇರಿಗಾಗಿ ಜಾಗ ಖರೀದಿಯಲ್ಲಿ ನಡೆದಿರುವ ಅಕ್ರಮದಲ್ಲಿ ಭಾಗಿಯಾಗಿರುವವರ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಮುಖ್ಯಮಂತ್ರಿಯವರು)**

**ಎ) ಶ್ರೀ ಅಮರನಾಥ ಪಾಟೀಲ್** ಅವರು ಉತ್ತರ ಕರ್ನಾಟಕದ ತೊಗರಿ ಅಭಿವೃದ್ಧಿ ಮಂಡಳಿಗೆ ಅಧಿಕಾರಿ/ನೌಕರರನ್ನು ನೇಮಿಸುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಕೃಷಿ ರಾಜ್ಯ ಸಚಿವರು)**

**ಏ) ಶ್ರೀ ಟಿ.ಎ. ಶರವಣ** ಅವರು ಜನಪ್ರತಿನಿಧಿಗಳು ತಮ್ಮ ಕ್ಷೇತ್ರದ ವ್ಯಾಪ್ತಿಗೆ ಬರುವ ಗ್ರಾಮವನ್ನು ಮಾತ್ರ ದತ್ತು ಪಡೆದು ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿ ಮಾಡುವ ಬಗ್ಗೆ ಕಟ್ಟುನಿಟ್ಟಿನ ಆದೇಶ ಮಾಡುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**ಐ) ಶ್ರೀಯುತರುಗಳಾದ: ನಸೀರ್ ಅಹಮದ್, ಡಿ.ಎಸ್. ವೀರಯ್ಯ, ವೈ.ಎ. ನಾರಾಯಣಸ್ವಾಮಿ ಹಾಗೂ ಆರ್. ಚೌಡರೆಡ್ಡಿ ತೂಪಲ್ಲಿ** ಅವರುಗಳು ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಸುಮಾರು 40 ಸಾವಿರ ಹೆಕ್ಟೇರ್ ಮಾವಿನ ತೋಟಗಳು ನಾಶವಾಗಿರುವ ಬಗ್ಗೆ **(ಮಾನ್ಯ ತೋಟಗಾರಿಕೆ ಸಚಿವರು)**

## 06. ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

| | |
|---|---|
| **I . ಶ್ರೀಯುತರುಗಳಾದ:**<br>**ಬಸವರಾಜ ಹೊರಟ್ಟಿ**<br>**ಮರಿತಿಬ್ಬೇಗೌಡ**<br>**ಬಿ. ರಾಮಕೃಷ್ಣ**<br>**ಇ. ಕೃಷ್ಣಪ್ಪ**<br>**ಎಂ.ಆರ್. ಹುಲಿನಾಯ್ಕರ್**<br>**ಹಾಗೂ ಇತರರು** | ಬಗರ್ ಹುಕುಂ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ರೈತರನ್ನು ತೆರವುಗೊಳಿಸುತ್ತಿರುವ ಬಗ್ಗೆ. |
| **II . ಶ್ರೀಯುತರುಗಳಾದ:**<br>**ಕೆ.ಬಿ. ಶಾಣಪ್ಪ**<br>**ಬಸವರಾಜ ಹೊರಟ್ಟಿ ಹಾಗೂ**<br>**ಅಮರನಾಥ ಪಾಟೀಲ್** | ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿಯೇ ಅತ್ಯಂತ ಕಡಿಮೆ ಮಳೆಯಿಂದಾಗಿ ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ಹೆಚ್ಚಿನ ಬೆಳೆ ಹಾನಿಯಾಗಿರುವುದರಿಂದ, ರೈತರಿಗೆ ಬೆಳೆ ನಷ್ಟ ಪರಿಹಾರವನ್ನು ನೀಡುವ ಬಗ್ಗೆ. |

## 07. ಅರ್ಧಗಂಟೆ ಕಾಲಾವಧಿ ಚರ್ಚೆ

ಅ) ಮೆಟ್ರೋ ನೌಕರರ ವೇತನದ ಬಗ್ಗೆ ದಿನಾಂಕ: 11.12.2014ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 41 (571)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ** ಅವರಿಂದ ಅರ್ಧಗಂಟೆ ಕಾಲಾವಧಿ ಚರ್ಚೆ.

ಆ) ತಿರುಪತಿ-ತಿರುಮಲ ಬೆಟ್ಟದಲ್ಲಿ ಸರ್ಕಾರಿ ಜಾಗದ ಬಗ್ಗೆ ದಿನಾಂಕ: 11.12.2014ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 42 (75)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಟಿ.ಎ. ಶರವಣ** ಅವರಿಂದ ಅರ್ಧಗಂಟೆ ಕಾಲಾವಧಿ ಚರ್ಚೆ.

ಇ) ಗ್ರಾಹಕರುಗಳು ವಂಚಿತರಾಗುತ್ತಿರುವ ಬಗ್ಗೆ ದಿನಾಂಕ: 15.12.2014ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 64 (817)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ದಯಾನಂದ** ಅವರಿಂದ ಅರ್ಧಗಂಟೆ ಕಾಲಾವಧಿ ಚರ್ಚೆ.

**ವಿ. ಶ್ರೀಶ್**
**ಕಾರ್ಯದರ್ಶಿ**

---